# 4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮೈಸೂರು

ಎಸ್‌ಸಿ. 34/2018

| | | | |
|---|---|---|---|
| ಸಾಕ್ಷಿದಾರರ ಹೆಸರು | ಃ ಗಣೇಶ ಜೆ. | | ಪ್ರಮಾಣ ಮಾಡಿಸಿದ ದಿನಾಂಕಃ |
| ತಂದೆ ಹೆಸರು | ಃ ಲೇಟ್. ಜಗದೀಶ | | 14.02.2020 |
| ವಯಸ್ಸು | ಃ 34 ವರ್ಷ | | |
| ವೃತ್ತಿ | ಃ ಟೈಲ್ಸ ಕೆಲಸ | ಪ್ರಾ.ಸಾ. ಃ | 15 |
| ವಾಸಸ್ಥಳ | ಃ ಮೈಸೂರು | ಚಾ.ಸಾ. ಃ | 15 |

<u>ಮುಖ್ಯ ವಿಚಾರಣೆ ಃ ಸರ್ಕಾರಿ ಅಭಿಯೋಜಕರಿಂದಃ</u>

. ನ್ಯಾಯಾಲಯದ ಮುಂದೆ ಇರುವ ಆರೋಪಿತರನ್ನು ನಾನು ನೋಡಿರುವುದಿಲ್ಲ. ಮೃತ ರಾಜು ಅಲಿಯಾಸ್ ಆರ್.ಆರ್.ಎಸ್. ಈತನ ಪರಿಚಯ ಇರುತ್ತದೆ. ದಿನಾಂಕಃ *13.03.2016* ರಂದು ಉದಯಗಿರಿನಲ್ಲಿರುವ ಎಂ.ಜಿ, ರಸ್ತೆಯಲ್ಲಿ ಆರ್.ಆಸ್.ಎಸ್. ರಾಜು ಈತನ ಕೊಲೆಯಾಗಿರುವ ಬಗ್ಗೆ ತಿಳಿದಿರುತ್ತದೆ. ಆಗ ನಾನು ಕೊಳ್ಳೆಗಾಲ ಪಟ್ಟಣದಲ್ಲಿದ್ದೆನು. ನಾನು ಮಲೇ ಮಹದೇಶ್ವರ ಬೆಟ್ಟಕ್ಕೆ ಮೈಸೂರಿನಿಂದ ಮಧ್ಯಾಹ್ನ *2.00* ಗಂಟೆಗೆ ಹೋಗಿರುತ್ತೇನೆ. ನಾನು ಕೊಳ್ಳೆಗಾಲ ಬಸ್ಸು ನಿಲ್ದಾಣದಲ್ಲಿರುವಾಗ ನನ್ನ ಸ್ನೇಹಿತ ರಾಜು ಈತನ ಕೊಲೆಯಾಗಿರುತ್ತದೆ ಎಂದು ತಿಳಿಸಿರುತ್ತಾನೆ. ನಾನು ಕೊಳ್ಳೆಗಾಲಕ್ಕೆ ಹೋಗಿ ಮೈಸೂರಿಗೆ ಬಂದಾಗ ರಾತ್ರಿ *9.00* ಗಂಟೆ ಸಮಯ ಆಗಿತ್ತು. ದಿನಾಂಕಃ *13.03.2016* ರಂದು ಸಂಜೆ *4.15* ರಿಂದ *4.30* ಗಂಟೆಯ ಸಮಯದಲ್ಲಿ ತಮ್ಮಯ್ಯ ಪಾರ್ಕ ರಸ್ತೆಯಲ್ಲಿ ನನ್ನ ಸ್ನೇಹಿತನನ್ನು ಕಾಯುತ್ತಿರಲಿಲ್ಲ. ನಾನು ಪಾರ್ಕ ಹತ್ತಿರ ನಿಂತಾಗ ಇಬ್ಬರೂ ಮುಸ್ಲಿಂ ಹುಡುಗರು ಒಂದು ಕಪ್ಪು ಬಣ್ಣದ ಟಿ.ವಿ.ಎಸ್, ಬೈಕ್ ನಿಲ್ಲಿಸಿಕೊಂಡು ನಿಂತಿರುವುದನ್ನು ನಾನು ನೋಡಿರುವುದಿಲ್ಲ. ನಂತರ ಅವರು ಎಂ.ಜಿ. ರಸ್ತೆಯ ಉದಯಗಿರಿ ಸರ್ಕಲ್ ಕಡೆ ಹೋಗಿರುವುದನ್ನು ನಾನು ನೋಡಿರುವುದಿಲ್ಲ. ನಾನು ಸ್ವಲ್ಪ ಹೊತ್ತಿನ ನಂತರ ನಾನು ಮನೆಗೆ ಹೋಗುವಾಗ ರಾಜು ಈತನ ಕೊಲೆಯಾಗಿರುವುದನ್ನು ನಾನು ನೋಡಿರುವುದಿಲ್ಲ. ಆ ಬಗ್ಗೆ ನಾನು ಪೊಲೀಸರ ಮುಂದೆ ಹೇಳಿಕೆಯನ್ನು ನೀಡಿರುವುದಿಲ್ಲ. ಅದಾದ *6* ತಿಂಗಳ ನಂತರ ನನ್ನನ್ನು ಪೊಲೀಸರು ಠಾಣೆಗೆ ಕರೆಯಿಸಿರುವುದಿಲ್ಲ. ಠಾಣೆಯಲ್ಲಿ ನಾನು *1* ಮತ್ತು *2* ನೇ ಆರೋಪಿತರನ್ನು ನೋಡಿ ಗುರುತಿಸಿರುವುದಿಲ್ಲ. ಆ ಬಗ್ಗೆ ನಾನು ಹೇಳಿಕೆಯನ್ನು ನೀಡಿರುವುದಿಲ್ಲ.

***<u>ಈ ಹಂತದಲ್ಲಿ, ಈ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಸರ್ಕಾರಿ ಅಭಿಯೋಜಕರು ಅನುಮತಿ ಕೋರಿದ್ದಾರೆ. ಸಾಕ್ಷಿಯ ಹೇಳಿಕೆಯನ್ನು ಪರಿಶೀಲಿಸಿ ಅನುಮತಿ ನೀಡಲಾಯಿತು.</u>***

***<u>ಪಾಟೀ ಸವಾಲುಃ ಸರ್ಕಾರಿ ಅಭಿಯೋಜಕರಿಂದಃ-</u>***

.ದಿನಾಂಕಃ **17.03.2016** ರಂದು ನಾನು ಪೊಲೀಸರ ಮುಂದೆ ಹೇಳಿಕೆ ನೀಡಿದ್ದೇನೆ ಎಂದು ಸೂಚಿಸುವುದು ಸರಿಯಲ್ಲ. ದಿನಾಂಕಃ **13.03.2016** ರಂದು ಸಂಜೆ ಸುಮಾರು **4.15** ರಿಂದ **4.30** ಗಂಟೆಯ ಸಮಯದಲ್ಲಿ ನನ್ನ ಕೆಲಸದ ನಿಮಿತ್ತ ಎಂ.ಜಿ. ರಸ್ತೆಯ ಮೂಲಕ ಲಾಯಲ್ ವರ್ಲ್ಡ ಕ್ರಾಸಿಂಗ್ ನಲ್ಲಿರುವ ತಮ್ಮಯ್ಯ ಪಾರ್ಕ ಕಡೆ ಇರುವ ರಸ್ತೆಯಲ್ಲಿ ತಿರುಗಿ ಸ್ವಲ್ಪ ಮುಂದೆ ಹೋಗಿ ನನ್ನ ಸ್ನೇಹಿತನಿಗಾಗಿ ಕಾಯುತ್ತಿದ್ದಾರ ಇಬ್ಬರೂ ಮುಸ್ಲಿಂ ಆಸಾಮಿಗಳು ಅನುಮಾನಸ್ಪದವಾಗಿ ಒಂದು ಕಪ್ಪು ಬಣ್ಣದ ಟಿ.ವಿ.ಎಸ್. ಬೈಕ್ ನಿಲ್ಲಿಸಿಕೊಂಡು ನಿಂತಿದ್ದು ಡಾರ್ಕ ಕಲ್ಲರ್ ಪ್ಯಾಟು ಮತ್ತು ತುಂಬು ತೋಳಿನ ಶರ್ಟ ಹಾಕಿಕೊಂಡಿದ್ದ ಆಸಾಮಿ ತನ್ನ ಹೆಲ್ಮೆಟನ್ನು ಬೈಕಿನ ಕನ್ನಡಿಗೆ ಹಾಕಿ, ತಾನು ಹಿಂದೆ ನೇತುಹಾಕೊಂಡಿದ್ದ ಕಾಲೇಜ್ ಬ್ಯಾಗಿನಿಂದ ಒಂದು ಮಚ್ಚನು ತೆಗೆದು, ಆತನ ಎದುರು ನಿಂತಿದ್ದ ಒಂದು ಕಪ್ಪು ಬಣ್ಣದ ಜರ್ಕಿನ್ ಹಾಗೂ ಕಲರ್ ಪ್ಯಾಂಟ್ ಧರಿಸಿದ್ದ ವ್ಯಕ್ತಿಯ ಕೈಗೆ ಕೊಟ್ಟನು ಎಂದು ನಾನು ಪೊಲೀಸರ ಮುಂದೆ ಹೇಳಿಕೆ ನೀಡಿದ್ದೇನೆ ಎಂದರೆ ಸರಿಯಲ್ಲ. ಅದನ್ನು ನಾನು ದೂರದಿಂದ ನಿಂತು ಗಮನಿಸಿದಾಗ ಕಪ್ಪು ಜರ್ಕಿನ್ ಹಾಕಿಕೊಂಡಿದ್ದ ವ್ಯಕ್ತಿ ಆ ಮಚ್ಚನ್ನು ತನ್ನ ಜರ್ಕಿನ್ ಒಳಗೆ ಇಟ್ಟುಕೊಂಡು ಜರ್ಕಿನ್ ನಲ್ಲಿದ್ದ ಕ್ಯಾಪನ್ನು ತಲೆಗೆ ಹಾಕಿಕೊಂಡು ಟಿ.ವಿ.ಎಸ್. ವಿಕ್ಟರ್ ಬೈಕಿನ ಹಿಂಭಾಗ ಕುಳಿತುಕೊಂಡ ಮತ್ತೊಬ್ಬ ಯುವಕ ಬೈಕಿನ ಕನ್ನಡಿಗೆ ಹಾಕಿದ್ದ ಫುಲ್ ಪೇಸ್ ಹೆಲ್ಮೆಟನ್ನು ಹಾಕಿಕೊಂಡು ಕಾಲೇಜ ಬ್ಯಾಗನ್ನು ತನ್ನ ಹಿಂಭಾಗಕ್ಕೆ ನೇತುಹಾಕಿಕೊಂಡು ಬೈಕ್ ಸ್ಟಾರ್ಟ ಮಾಡಿ ಆ ಇಬ್ಬರೂ ರಾಯಲ್ ಫುಡ್ ವರ್ಲ್ಡ ಕಡೆ ಎಂ.ಜಿ. ರಸ್ತೆಯ ಉದಯಗಿರಿ ಸರ್ಕಲ್ ಕಡೆ ವೇಗವಾಗಿ ಹೊರಟು ಹೋದರು ಎಂದು ಪೊಲೀಸರ ಮುಂದೆ ಹೇಳಿಕೆ ಕೊಟ್ಟಿದ್ದೇನೆ ಎಂದು ಸೂಚಿಸುವುದು ಸರಿಯಲ್ಲ. ಇದಾದ ಸ್ವಲ್ಪ ಹೊತ್ತಿನ ನಂತರ ನಾನು ವಿನಾಯಕ ಟೀ ಸ್ಟಾಲ್ ಹತ್ತಿರ ಹೋದಾಗ ಜನರು ತುಂಬಿದ್ದರು ನಾನು ಏನು ಎಂದು ಹೋಗಿ ನೋಡಲಾಗಿ ರಾಜು ಈತನನ್ನು ಯಾರೋ ದುರ್ಷರ್ಮಿಗಳು ಹಲ್ಲೆ ಮಾಡಿದ್ದು ಆತನನ್ನು ಆಸ್ಪತ್ರೆಗೆ ಕರೆದುಕೊಂಡು ಹೋದರು ಎಂದು ಪೊಲೀಸರ ಮುಂದೆ ಹೇಳಿಕೆ ನೀಡಿದ್ದೇನೆ ಎಂದು ಸೂಚಿಸುವುದು ಸರಿಯಲ್ಲ. ಅಲ್ಲಿದ್ದ ಜನರನ್ನು ವಿಚಾರಿಸಿದಾಗ

ಇಬ್ಬರೂ ವ್ಯಕ್ತಿಗಳು ಒಂದೇ ಬೈಕಿನಲ್ಲಿ ಬಂದು ಲಾಂಗು ಮಚ್ಚಿನಿಂದ ರಾಜುವಿನ ತಲೆಗೆ ಮತ್ತು ಬೆನ್ನಿಗೆ ಹೊಡೆದು ಹೊರಟು ಹೋದರು ಎಂದು ನನಗೆ ಹೇಳಿದರು ಎಂದು ಪೊಲೀಸರ ಮುಂದೆ ಹೇಳಿಕೆ ನೀಡಿದ್ದೇನೆ ಎಂದರೆ ಸರಿಯಲ್ಲ. ಇದೆಲ್ಲಾವನ್ನು ಗಮನಿಸಿದಾಗ ರಾಯಲ್ ವರ್ಲ್ಡ್ ಹತ್ತಿರ ಇದ್ದ ಇಬ್ಬರೂ ವ್ಯಕ್ತಿಗಳು ಈ ಕೃತ್ಯ ಮಾಡಿದ್ದಾರೆ ಎಂದು ಅನಿಸುತ್ತದೆ ಎಂದು ಪೊಲೀಸರ ಮುಂದೆ ಹೇಳಿಕೆ ನೀಡಿದ್ದೇನೆ ಎಂದರೆ ಸರಿಯಲ್ಲ. ಸದರಿ ಹೇಳಿಕೆಯನ್ನು ನಿ.ಪಿ.17 ಎಂದು ಗುರುತಿಸಲಾಯಿತು.

ದಿನಾಂಕಃ **02.09.2016** ರಂದು ಪುನಃ ಎ.ಸಿ.ಪಿ. ಗೋಪಾಲ್ ಇವರ ಕಚೇರಿಗೆ ನನ್ನನ್ನು ಕರೆಯಿಸಿಕೊಂಡರು ಎಂದು ಸೂಚಿಸುವುದು ಸರಿಯಲ್ಲ. ರಾಯಲ್ ವರ್ಲ್ಡ್ ನ ಮುಂದೆ ಅನುಮಾನಸ್ಪದವಾಗಿ ಇಬ್ಬರೂ ವ್ಯಕ್ತಿಗಳು ಓಡಾಡುತ್ತಿದ್ದರು ಆ ದಿನ ಪೊಲೀಸ್ ವಶದಲ್ಲಿದ್ದರು ಅವರನ್ನು ನಾನು ನೋಡಿ ಗುರುತಿಸಿರುತ್ತೇನೆ ಎಂದು ನಾನು ಪೊಲೀಸರ ಮುಂದೆ ಹೇಳಿಕೆ ನೀಡಿದ್ದೇನೆ ಎಂದರೆ ಸರಿಯಲ್ಲ. ಸದರಿ ವ್ಯಕ್ತಿಗಳು ಆರೋಪಿ **1** ಮತ್ತು **2** ಇದ್ದು ಅವರು ಇಂದು ನ್ಯಾಯಾಲಯದ ಮುಂದೆ ಇದ್ದಾರೆ ಎಂದರೆ ಸರಿಯಲ್ಲ. ಆರೋಪಿ **1** ಮತ್ತು **2** ಇವರನ್ನು ಗುರುತಿಸಿದ್ದರು ಕೂಡ ಆರೋಪಿಗಳಿಗೆ ಸಹಾಯ ಮಾಡಲು ಆರೋಪಿಗಳನ್ನು ನೋಡಿಲ್ಲ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ಹೇಳಿಕೆಯನ್ನು ನಿ.ಪಿ.**18** ಎಂದು ಗುರುತಿಸಲಾಯಿತು.

**ಪಾಟೀ ಸವಾಲು ಃ ಎಲ್ಲಾ ಆರೋಪಿತರ ಪರ ವಕೀಲರಿಂದಃ-**

. ಇಲ್ಲಾ.

***ಮರು ವಿಚಾರಣೆಃ- ಇಲ್ಲ.***

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

*ಓ ಹೇ ಕೇ ಸ ಇ ಎ ಒ.,*

*4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,*
*ಮೈಸೂರು*